**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ.**

**ಎಸ್.ಸಿ.209/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶಿವಾನಂದ | ಫ್ರಾಸಾ-11 |
| ತಂದೆಯ ಹೆಸರು | : | ಯಲ್ಲಪ್ಪ | ಚಾಸಾ-21 |
| ವಯಸ್ಸು | : | 31 ವರ್ಷ | |
| ಕೆಲಸ | : | ಪಿ ಎಸ್ ಐ, ನಗರ ಪೊಲೀಸ್ ಠಾಣೆ, ಹೊಸನಗರ | |
| ವಾಸ ಸ್ಥಳ | : | ಹೊಸನಗರ | |

ದಿಃ 18.03.2026 ರಂದು ಪ್ರಮಾಣ ವಚನ ಮಾಡಿಸಲಾಯಿತು

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ-**

1) ದಿಃ 01.03.2020 ರಿಂದ 30.06.2021 ರವರೆಗೆ ನಾನು ಕೋಟೆ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

2) ದಿಃ 04.12.2020 ರಂದು ಚಾಸಾ-20ರವರಿಂದ ಈ ಪ್ರಕರಣದ ಕಡತವನ್ನು ಸ್ವೀಕರಿಸಿ, ಪರಿಶೀಲಿಸಿ, ತನಿಖೆಯನ್ನು ಮುಂದುವರೆಸಿದ್ದೇನೆ. ಅದೇ ದಿನ ಚಾಸಾ-1 ರವರ ಮುಂದುವರಿದ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ.

3) ಅದೇ ದಿನ ಚಾಸಾ-1 ರವರು ಘಟನಾ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿದ್ದರಿಂದ ಚಾಸಾ-3 ಹಾಗೂ 8 ರವರನ್ನು ಠಾಣೆಗೆ ಕರೆಸಿಕೊಂಡು ಅವರಿಗೆ ಪ್ರಕರಣದ ಬಗ್ಗೆ ಮಾಹಿತಿ ನೀಡಿ ಪಂಚರಾಗ ಬೇಕೆಂದು ಕೇಳಿಕೊಂಡು ನೋಟೀಸನ್ನು ಜಾರಿ ಮಾಡಿರುತ್ತೇನೆ. ಸದರಿ ನೋಟೀಸನ್ನು ಈಗ ನೋಡುತ್ತಿದ್ದು ಅದು **ನಿಪಿ-14** ಆಗಿದೆ. ಅದರಲ್ಲಿರುವ ನನ್ನ ಸಹಿ **ನಿಪಿ-14(ಎ)** ಆಗಿದೆ. ನಂತರ ನಾನು ಚಾಸಾ-1, 3 ಮತ್ತು 8 ರವರೊಂದಿಗೆ ಘಟನಾ ಸ್ಥಳಕ್ಕೆ ಬೇಟಿ ನೀಡಿರುತ್ತೇನೆ. ಅಲ್ಲಿ ಚಾಸಾ-1 ರವರು ತೋರಿಸಿಕೊಟ್ಟ ಸ್ಥಳದಲ್ಲಿ ಚಾಸಾ-3 ಹಾಗೂ 8 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ತಯಾರಿಸಿರುತ್ತೇನೆ. ಸ್ಥಳದಲ್ಲಿ ಜಕಂ ಗೊಂಡ ಆಟೋ ಹಾಗೂ ಗಾಜಿನ ಚೂರು ಇದ್ದು, ಅವುಗಳನ್ನು ವಶಪಡಿಸಿಕೊಂಡಿರುತ್ತೇನೆ. ನಂತರ ಸ್ಥ,ಳದಲ್ಲಿ ಕಚ್ಚಾ ನಕಾಶೆಯನ್ನು

ತಯಾರಿಸಿದ್ದೇನೆ ಮತ್ತು ಫೋಟೋಗಳನ್ನು ತೆಗೆದಿರುತ್ತೇನೆ. ಪಂಚನಾಮೆಯನ್ನು ನಾನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–2 ಎಂದು ಗುರುತಿಸಲಾಗಿದೆ. ಅದರಲ್ಲಿರುವ ನನ್ನ ಸಹಿ **ನಿಪಿ–2(ಡಿ)** ಆಗಿದೆ. ಕಚ್ಚಾ ನಕಾಶೆಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–3 ಎಂದು ಗುರುತಿಸಲಾಗಿದೆ. ಅದರಲ್ಲಿರುವ ನನ್ನ ಸಹಿ **ನಿಪಿ–3(ಎ)** ಆಗಿದೆ. ಸ್ಥಳದಲ್ಲಿ ತೆಗೆದಿರುವ ಫೋಟೋ ವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–4 ಎಂದು ಗುರುತಿಸಲಾಗಿದೆ. ಪಂಚನಾಮೆಯನ್ನು ಮಃ 1.30 ರಿಂದ 2.30 ರವರೆಗೆ ತಯಾರಿಸಿರುತ್ತೇನೆ. ನಂತರ ಅಮಾನತ್ತು ಪಡಿಸಿಕೊಂಡ ಮುದ್ದೆಮಾಲುಗಳನ್ನು ಮಾಲುಪಟ್ಟಿ ಸಂ. 134/2020ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿ ಕೊಂಡಿರುತ್ತೇನೆ. ಅದೇ ದಿನ ವಶಪಡಿಸಿಕೊಂಡಿರುವ ಗಾಜಿನ ಚೂರುಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ಎಂಓ– 1 ಎಂದು ಗುರುತಿಸಲಾಗಿದೆ. ನಾನು ಆ ದಿನ ವಶಪಡಿಸಿಕೊಂಡಿರುವ ಆಟೋ ನನಗೆ ಈಗ ತೋರಿಸಿದ ನಿಪಿ–4 ಫೋಟೋದಲ್ಲಿದೆ. ಅದೇ ದಿನ ಚಾಸಾ–2 ರಿಂದ 5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

4) ದಿ: 05.12.2020 ರಂದು ಚಾಸಾ–17 ರವರ ಮೂಲಕ ಪಂಚರಾದ ಚಾಸಾ–9 ಹಾಗೂ 10 ರವರನ್ನು ಠಾಣೆಗೆ ಬರಮಾಡಿಕೊಂಡು ಪ್ರಕರಣದ ಬಗ್ಗೆ ಅವರಿಗೆ ಮಾಹಿತಿಯನ್ನು ತಿಳಿಸಿ ಆರೋಪಿ ಪತ್ತೆಗಾಗಿ ದಿನೇಶ್ ಎಂಬುವವರಿಗೆ ಸೇರಿದ ಅಂಬಿಕಾ ಜ್ಯೂವೆಲರ್ಸ್ ನ ಸಿಸಿ ಟಿ ವಿ ದೃಶ್ಯಾವಳಿಗಳನ್ನು ವಶಪಡಿಸಿಕೊಳ್ಳಬೇಕಾಗಿದೆ, ಆ ಸಮಯದಲ್ಲಿ ಹಾಜರಿದ್ದು ಪಂಚರಾಗಿ ಸಹಕರಿಸುವಂತೆ ನೋಟೀಸನ್ನು ನೀಡಿರುತ್ತೇನೆ. ಸದರಿ ನೋಟೀಸನ್ನು ಈಗ ನೋಡುತ್ತಿದ್ದು ಅದು ನಿಪಿ–15 ಆಗಿದೆ. ಅದರಲ್ಲಿರುವ ನನ್ನ ಸಹಿ ನಿಪಿ–15(ಎ) ಆಗಿದೆ. ನಂತರ ಚಾಸಾ–17 ರವರ ಮೂಲಕ ಸಿಸಿಟಿ ಟೆಕ್ನಿಶಿಯನ್ ಆದ ಚಾಸಾ–11 ರವರನ್ನು ಠಾಣೆಗೆ ಕರೆಸಿಕೊಂಡು ಅವರಿಗೆ ಮಾಹಿತಿಯನ್ನು ನೀಡಿ ಸಿಸಿಟಿ ಡಿವಿಆರ್ ನಿಂದ ಡಿವಿಡಿ ಗೆ ಸಿಸಿಟಿ ದೃಶ್ಯಾವಳಿಗಳನ್ನು ಕಾಪಿ ಮಾಡಿಕೊಡುವಂತೆ ಕೇಳಿಕೊಂಡು ನೋಟೀಸನ್ನು ಜಾರಿ ಮಾಡಿರುತ್ತೇನೆ.

5) ಅದೇ ದಿನ ನಡೆದ ಪ್ರಕರಣಕ್ಕೆ ಸಂಬಂಧಪಟ್ಟ ಪಿರ್ಯಾದುದಾರರಾದ ಇರ್ಫಾನ್ ಖಾನ್ ಮತುತ ದಾದಾಪೀರ್ ಎಂಬುವವರನ್ನು ಠಾಣೆಗೆ ಬರಮಾಡಿಕೊಂಡೆನು. ಬೆಃ 11.00 ಗಂಟೆಗೆ 3

ಜನ ಪಿರ್ಯಾದಿದಾರರು, ಒಬ್ಬ ಟೆಕ್ನಿಶಿಯನ್ ಹಾಗೂ ಇಬ್ಬರು ಪಂಚರು ಹಾಗೂ ಸಿಬ್ಬಂದಿಗಳೊಂದಿಗೆ ದಿನೇಶ್ ಎಂಬುವವರಿಗೆ ಸೇರಿದ ಅಂಬಿಕಾ ಜ್ಯೂವೆಲರ್ಸ್ ಎಂಬ ಅಂಗಡಿಗೆ ಪೊಲೀಸ್ ವಾಹನ ಹಾಗೂ ದ್ವಿ ಚಕ್ರ ವಾಹನಗಳಲ್ಲಿ ಹೋಗಿರುತ್ತೇವೆ. ಅಲ್ಲಿ ಅಂಬಿಕಾ ಜ್ಯೂವೆಲರ್ಸ್ ನ ಮಾಲೀಕರಾದ ದಿನೇಶ್ ರವರಿಗೆ ಸಿಸಿ ಟಿವಿ ದೃಶ್ಯಾವಳಿಗಳನ್ನು ಒದಗಿಸುವಂತೆ ಕೇಳಿಕೊಂಡಿರುತ್ತೇನೆ. ಅವರು ಅದಕ್ಕೆ ಒಪ್ಪಿಕೊಂಡರು. ನಂತರ ಅವರ ಅಂಗಡಿಯ ಒಳಗೆ ಇದ್ದ ಸಿಸಿಟಿವಿ ಡಿವಿಆರ್ ನಿಂದ ಸಿಸಿಟಿ ದೃಶ್ಯಾವಳಿಗಳನ್ನು ಪಂಚರ ಹಾಗೂ ಪಿರ್ಯಾದಿದಾರರ ಸಮಕ್ಷಮ ಟೆಕ್ನಿಶಿಯನ್ ಆದ ಚಾಸಾ–11 ರವರ ಸಹಾಯದಿಂದ ವೀಕ್ಷಿಸಿದೆನು. ದಿಃ 03.12.2020 ರಂದು ಮಃ 12.34 ರಿಂದ 12.36 ರವರೆಗಿನ 2 ನಿಮಿಷಗಳ ದೃಶ್ಯಾವಳಿಗಳನ್ನು ಚಾಸಾ-11ರವರು ಡಿವಿಡಿಗೆ ಡೌನಲೋಡ್ ಮಾಡಿಕೊಟ್ಟಿರುತ್ತಾರೆ. 3 ಜನ ಪಿರ್ಯಾದಿದಾರರು ಮತ್ತು ಸಿಬ್ಬಂದಿಗಳು ಆರೋಪಿತರನ್ನು ಸದರಿ ದೃಶ್ಯಾವಳಿಗಳಲ್ಲಿ ಗುರುತಿಸಿದರು. ಸದರಿ ಸ್ಥಳದಲ್ಲಿ ಬೆಃ 11.15 ರಿಂದ ಮಃ 1.30 ರವರೆಗೆ ಪಂಚನಾಮೆ ತಯಾರಿಸಿರುತ್ತೇನೆ. ಮತುತ ಭಾವ ಚಿತ್ರ ತೆಗೆಸಿರುತ್ತೇನೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–7 ಎಂದು ಗುರುತಿಸಲಾಗಿದೆ. ಅದರಲ್ಲಿರುವ ನನ್ನ ಸಹಿ ನಿಪಿ–7(ಸಿ) ಆಗಿದೆ. ಆ ಸಮಯದಲ್ಲಿ ತೆಗೆದಿರುವ ಪೋಟೋ ವನ್ನು ನೋಡುತ್ತಿದ್ದು ಅದನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–8 ಎಂದು ಗುರುತಿಸಲಾಗಿದೆ. ಆ ದಿನ ಕಾಪಿ ಮಾಡಿಕೊಂಡಿರುವ ದೃಶ್ಯಾವಳಿ ನಿಪಿ–9 ಡಿವಿಡಿಯಲ್ಲಿ ಇದ್ದು ನಾನು ಈಗ ನೋಡಿ ಗುರುತಿಸಿದ್ದೇನೆ. ಸದರಿ ಡಿವಿಡಿಯನ್ನು ಮಾಲುಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿ ಕೊಂಡಿರುತ್ತೇನೆ. ಅದೇ ದಿನ ಚಾಸಾ–6 ಮತ್ತು 7 ರವರ ಸಾಕ್ಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ

6) ದಿಃ 06.01.2021 ರಂದು 1 ರಿಂದ 11ನೇ ಆರೋಪಿತರನ್ನು ದಸ್ತಗಿರಿ ಮಾಡಿರುತ್ತೇನೆ. ಅವರುಗಳಲ್ಲಿ ಒಬ್ಬನು ಅಪ್ರಾಪ್ತ ವಯಸ್ಕನಾಗಿದ್ದನು. 10 ಜನ ಆರೋಪಿತರನ್ನು ದಸ್ತಗಿರಿ ಮಾಡಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಅಪ್ರಾಪ್ತ ವಯಸ್ಕ ವ್ಯಕ್ತಿಯನ್ನು ಬಾಲ ನ್ಯಾಯ ಮಂಡಳಿ ಮುಂದೆ ಹಾಜರುಪಡಿಸಿದ್ದೇನೆ.

7) ಆರೋಪಿತರನ್ನು ನಾನು ಈಗ ನೋಡಿ ಗುರುತಿಸಿದ್ದೇನೆ. 1 ರಿಂದ 10ನೇ ಆರೋಪಿತರ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

8) 1 ಮತ್ತು 2ನೇ ಆರೋಪಿತರು ದೊಣ್ಣೆಯನ್ನು ಕಾಲುವೆಯಲ್ಲಿ ಬಿಸಾಡಿರುತ್ತೇವೆ ಎಂದು ಹೇಳಿಕೆ ನೀಡಿರುತ್ತಾರೆ. ನಂತರ ಚಾಸಾ-17 ರವರ ಮೂಲಕ ಪಂಚರಾದ ಚಾಸಾ-9 ಹಾಗೂ 10 ರವರನ್ನು ಬರಮಾಡಿಕೊಂಡು ಅವರಿಗೆ ಪ್ರಕರಣದ ಮಾಹಿತಿಯನ್ನು ತಿಳಿಸಿ ನಾನು, ಪಂಚರು ಹಾಗೂ 1 ವತ್ತು 2ನೇ ಆರೋಪಿತರು ನಮ್ಮ ಇಲಾಖಾ ವಾಹನದಲ್ಲಿ ಠಾಣೆಯಿಂದ ಹೊರಟು 1 ವತ್ತು 2ನೇ ಆರೋಪಿತರು ದಾರಿ ತೋರಿಸಿ ಕೊಟ್ಟಂತೆ ತಿರುಪಾಳಯ್ಯನ ಕೇರಿ ಹತ್ತಿರ ಹೋಗಿದ್ದು ಅಲ್ಲಿ ಆರೋಪಿತರು ವಾಹನವನ್ನು ನಿಲ್ಲಿಸಲು ಹೇಳಿದ್ದು, ಅವರು ವಾಹನದಿಂದ ಕೆಳಗೆ ಇಳಿದು ಅಂತರಘಟ್ಟಮ್ಮ ದೇವಸ್ಥಾನದ ಹತ್ತಿರ ಕನ್ಸರವೆನ್ಸಿ ರಸ್ತೆಯಲ್ಲಿ ಕರೆದುಕೊಂಡು ಹೋಗಿ ದೊಣ್ಣೆಗಳನ್ನು ಬಿಸಾಡಿದ ಸ್ಥಳ ಎಂದು ತೋರಿಸಕೊಟ್ಟಿರುತ್ತಾರೆ. ಅವುಗಳನ್ನು ಹುಡುಕಲಾಗಿ ದೊಣ್ಣೆಗಳು ಅಲ್ಲಿ ಸಿಕ್ಕಿರುವುದಿಲ್ಲ. ಅಲ್ಲಿ ಪಂಚನರಮೆಯನ್ನು ಮಃ 2.45 ರಿಂದ 3.45 ರವರೆಗೆ ನಿಪಿ-11 ರಂತೆ ತಯಾರಿಸಿರುತ್ತೇನೆ. ಅದರಲ್ಲಿರುವ ನನ್ನ ಸಹಿ ನಿಪಿ-11(ಬಿ) ಆಗಿದೆ.

9) ಅದೇ ದಿನ ಚಾಸಾ-1 ರವರನ್ನು ಠಾಣೆಗೆ ಕರೆಸಿದ್ದು ಅವರು 1 ರಿಂದ 4ನೇ ಆರೋಪಿತರನ್ನು ಗುರುತುಹಚ್ಚಿದ್ದಾರೆ. ಅದೇ ದಿನ ಚಾಸಾ-2 ರಿಂದ 6 ರವರು ಮುಂದುವರಿದ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ.

10) ದಿಃ 07.01.2021 ರಂದು ಆರ್ ಟಿ ಓ ಶಿವಮೊಗ್ಗ ರವರು ಜಕಂಗೊಂಡ ಆಟೋವನ್ನು ತಪಾಸಣೆ ಮಾಡಿ ನಷ್ಟವನ್ನು ಅಂದಾಜು 5,000/- ರೂ. ಎಂದು ಹೇಳಿರುತ್ತಾರೆ. ಅದನ್ನು ನಾನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-12 ಎಂದು ಗುರುತಿಸಲಾಗಿದೆ. ಅದರಲ್ಲಿರುವ ನನ್ನ ಸಹಿ ನಿಪಿ-12(ಬಿ) ಆಗಿದೆ. ಪಂಚನಾಮೆ ಸಮಯದಲ್ಲಿ ಪೋಟೋ ತೆಗೆದಿರುವ ಬಗ್ಗೆ ಕಲಂ 65-ಬಿ ಸರ್ಟಿಫಿಕೇಟನ್ನು ನೀಡಿರುತ್ತೇನೆ. ಸದರಿ ಸರ್ಟಿಫಿಕೇಟನ್ನು ಈಗ ನೋಡುತ್ತಿದ್ದು ಅದು ನಿಪಿ-16 ಆಗಿದೆ. ಅದರಲ್ಲಿರುವ ನನ್ನ ಸಹಿ ನಿಪಿ-(ಎ) ಆಗಿದೆ. ಮುಂದಿನ ತನಿಖೆಯನ್ನು ಚಾಸಾ-22ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಜಿ ಆರ್ ಆರ್ ವಕೀಲರಿಂದಃ**

11) ನಾನು ಘಟನಾ ಸ್ಥಳಕ್ಕೆ ಬೇಟಿ ನೀಡಿಲ್ಲ ಹಾಗೂ ಸ್ಥಳ ಪಂಚನಾಮೆ ಹಾಗೂ ಕಚ್ಚಾ ನಕಾಶೆ ತಯಾರಿಸಿಲ್ಲ ಅಂದರೆ ಸರಿಯಲ್ಲ. ಅಂಬಿಕಾ ಜ್ಯೂವೆಲರ್ಸ್ ಅಲ್ಲಿ ಸಿಸಿ ಟಿವಿ ಇದೆ ಎಂದು ನಮಗೆ ಬಾತ್ಮಿದಾರರಿಂದ ಗೊತ್ತಾಗಿತ್ತು. ಅವರನ್ನು ನಾನು ಅಲ್ಲಿಗೆ ಕರೆದುಕೊಂಡು ಹೋಗಿಲ್ಲ. ಸಿಸಿಟಿವಿ ಪೋಟೇಜನ್ನು ನಕಲು ಮಾಡುವ ಸಂದರ್ಭದಲ್ಲಿ ಪೋಟೋ ತೆಗೆದಿಲ್ಲ ಅಂದರೆ ಸರಿಯಲ್ಲ. ನಿಪಿ–8 ರ ಪೋಟೋ ವನ್ನು ಪೊಲೀಸ್ ಠಾಣೆಯಲ್ಲಿ ತೆಗೆಯಲಾಗಿದೆ ಅಂದರೆ ಸರಿಯಲ್ಲ. ಸಿಸಿಟಿವಿ ಪೋಟೇಜುಗಳನ್ನು ವೈಜ್ಞಾನಿಕ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿಲ್ಲ. ಆ ಪೋಟೋಗಳಿಗೆ ಸಂಬಂಧಿಸಿದಂತೆ ಕಲಂ 65–ಬಿ ಸರ್ಟಿಫಿಕೇಟನ್ನು ಚಾಸಾ–11ರವರಿಂದ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ–7 ಪಂಚನಾಮೆಯನ್ನು ತಯಾರಿಸಿಲ್ಲ ಅಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದುಕೊಂಡಿಲ್ಲ ಅಂದರೆ ಸರಿಯಲ್ಲ. ಆರೋಪಿತರನ್ನು ಅಶೋಕ ರಸ್ತೆಯಲ್ಲಿ ದಸ್ತಗಿರಿ ಮಾಡಿದ್ದೇನೆ. ಆರೋಪಿತರನ್ನು ದಸ್ತಗಿರಿ ಮಾಡಿಲ್ಲ ಮತ್ತು ಮನೆಯಿಂದ ಕರೆಸಿದ್ದೇನೆ ಅಂದರೆ ಸರಿಯಲ್ಲ.

12) ನಾನು ನಿಪಿ–11 ಪಂಚನಾಮೆಯನ್ನು ಸ್ಥಳಕ್ಕೆ ಹೋಗಿ ತಯಾರಿಸಿಲ್ಲ ಅಂದರೆ ಸರಿಯಲ್ಲ. 1 ರಿಂದ 4ನೇ ಆರೋಪಿತರನ್ನು ಸಾಕ್ಷಿದಾರರು ಠಾಣೆಯಲ್ಲಿ ಗುರುತು ಹಚ್ಚಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

(ಓದಿ ಹೇ.ಕೇ ಸರಿ ಇದೆ ಎಂದು ಒಪ್ಪಿರುತ್ತಾರೆ.)

3 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸೆಷನ್ಸ್ ನ್ಯಾಯಾಧೀಶರು, ಶಿವಮೊಗ್ಗ.